ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 8–8–2017

# ಪತ್ರಿಕಾ ಆಮಂತ್ರಣ

1. ಪತ್ರಿಕಾಗೋಷ್ಠಿ:

"ಬರಮುಕ್ತ ಭಾರತಕ್ಕಾಗಿ ರಾಷ್ಟ್ರೀಯ ಜಲ ಸಮಾವೇಶ"– ಕುರಿತು

ಎಂ.ಬಿ. ಪಾಟೀಲ್,
ಜಲಸಂಪನ್ಮೂಲ ಸಚಿವರು

ಡಾ: ರಾಜೇಂದ್ರ ಸಿಂಗ್,
ಸ್ಟಾಕ್ ಹೋಮ್ ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತರು ಮತ್ತು ಮ್ಯಾಗ್ಸೆಸ್ಸೆ ಪ್ರಶಸ್ತಿ ವಿಜೇತರು

ದಿನಾಂಕ: 09–8–2017 ಬುಧವಾರ, ಸಮಯ: ಅಪರಾಹ್ನ 12–00 ಗಂಟೆಗೆ
ಸ್ಥಳ: ಕೊಠಡಿ ಸಂಖ್ಯೆ 344, 3 ನೇ ಮಹಡಿ, ವಿಧಾನ ಸೌಧ, ಬೆಂಗಳೂರು

2. ಅ) ಕನ್ನಡ ಭಾಷೆಯ ಬಳಕೆಯ ಬಗ್ಗೆ ಪ್ರಗತಿ ಪರಿಶೀಲನೆ:

ಪ್ರೊ. ಎಸ್.ಜಿ. ಸಿದ್ದರಾಮಯ್ಯ,
ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

ದಿನಾಂಕ: 9–8–2017 ಬುಧವಾರ ಸಮಯ: ಬೆಳಿಗ್ಗೆ 11–00 ಗಂಟೆಗೆ
ಸ್ಥಳ: ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು

ಆ) ಕನ್ನಡ ಭಾಷೆಯ ಬಳಕೆಯ ಬಗ್ಗೆ ಪ್ರಗತಿ ಪರಿಶೀಲನೆ:
ದಿನಾಂಕ: 9–8–2017 ಬುಧವಾರ ಸಮಯ: 12–00 ಗಂಟೆಗೆ
ಸ್ಥಳ: ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಕಛೇರಿ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ

ಸಬಲೀಕರಣ ಇಲಾಖೆ, ಗೇಟ್ ನಂ. 3, ನೆಲಮಹಡಿ, ಬಹುಮಹಡಿಗಳ ಕಟ್ಟಡ,
. ಬೆಂಗಳೂರು

## ಪತ್ರಿಕಾ ಪ್ರಕಟಣೆ

30/30

# ನಿಜಲಿಂಗಪ್ಪ ಭಾವಚಿತ್ರಕ್ಕೆ ಮುಖ್ಯಮಂತ್ರಿಗಳಿಂದ ನಮನ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಮಾಜಿ ಮುಖ್ಯಮಂತ್ರಿ ದಿವಂಗತ ನಿಜಲಿಂಗಪ್ಪ ಅವರ ಪುಣ್ಯತಿಥಿ ಅಂಗವಾಗಿ ವಿಧಾನ ಸೌಧ ಆವರಣದಲ್ಲಿರುವ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್, ಸಮಾಜ ಕಲ್ಯಾಣ ಸಚಿವ ಹೆಚ್.ಆಂಜನೇಯ ಅವರುಗಳು ಉಪಸ್ಥಿತರಿದ್ದರು.

31/31

# ಒಂದು ವರ್ಷದ ಅಪ್ರೆಂಟಿಸ್‌ಶಿಪ್‌ಗೆ ಸಂದರ್ಶನ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ತಾಂತ್ರಿಕ ಶಿಕ್ಷಣ ಇಲಾಖೆ ಬಿ.ಇ ಮತ್ತು ಡಿಪ್ಲೋಮೊದಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ವಿವಿಧ ಉದ್ದಿಮೆಗಳಲ್ಲಿ ಒಂದು ವರ್ಷದ ಅಪ್ರೆಂಟಿಸ್‌ಶಿಪ್(**Apprenticeship**) ತರಬೇತಿಗಾಗಿ ಸಂದರ್ಶನವನ್ನು ಹಮ್ಮಿಕೊಂಡಿದೆ.

ದಿನಾಂಕ 11-08-2017 ರಂದು ಬೆಳಿಗ್ಗೆ 10.00 ರಿಂದ ಅಪರಾಹ್ನ 5.30 ರವರೆಗೆ ಕೆಮಿಕಲ್ ಬ್ಲಾಕ್, ಎಸ್. ಜೆ. ಸರ್ಕಾರಿ ಪಾಲಿಟೆಕ್ನಿಕ್, ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿ ಸಂದರ್ಶನವನ್ನು ನಡೆಸಲಾಗುವುದು.

ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ನೋಂದಣಿ ಮಾಡಿಕೊಳ್ಳಲಾಗುವುದು. ಇದರಲ್ಲಿ ಸರ್ಕಾರಿ, ಅರೆ ಸರ್ಕಾರಿ ಮತ್ತು ಖಾಸಗಿ ಉದ್ದಿಮೆಗಳು

ಭಾಗವಹಿಸಲಿದ್ದು, ವಿದ್ಯಾರ್ಥಿಗಳು ಇದರ ಉಪಯೋಗವನ್ನು ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

**32/32**

# 2017 ನೇ ಸಾಲಿನ ಶ್ರೀ ಕೃಷ್ಣ ಜಯಂತಿ

ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಮಟ್ಟದ ಶ್ರೀ ಕೃಷ್ಣ ಜಯಂತಿಯನ್ನು ದಿನಾಂಕ: 14-08-2017 ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದೆ.

ಈ ಸಮಾರಂಭದ ಅಂಗವಾಗಿ ಬೆಳಿಗ್ಗೆ 10:00 ಗಂಟೆಗೆ ಧರ್ಮರಾಯನ ದೇವಸ್ಥಾನದಿಂದ ರವೀಂದ್ರ ಕಲಾಕ್ಷೇತ್ರದವರೆಗೆ ಜಾನಪದ ಕಲಾಪ್ರದರ್ಶನವನ್ನು ಏರ್ಪಡಿಸಿದ್ದು, ಬೆಳಿಗ್ಗೆ 11:00 ಗಂಟೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಸಮಾರಂಭದ ಅದ್ಯಕ್ಷತೆಯನ್ನು ಶಾಸಕರು, ಚಿಕ್ಕಪೇಟೆ ವಿಧಾನ ಸಭಾಕ್ಷೇತ್ರ, ಆರ್. ವಿ. ದೇವರಾಜ್ ವಹಿಸಲಿದ್ದು, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಅನಂತ ಕುಮಾರ್, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಇಲಾಖೆ, ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ಜೆ. ಜಾರ್ಜ್, ಬೆಂಗಳೂರು ನಗರ ಮಹಾ ಪೌರರರು ಶ್ರೀಮತಿ ಜಿ. ಪದ್ಮಾವತಿ, ಶಾಸಕಿ, ಪುತ್ತೂರು ವಿಧಾನ ಸಭಾ ಕ್ಷೇತ್ರ ಹಾಗೂ ಸಂಸದೀಯ ಕಾರ್ಯದರ್ಶಿ, ಶ್ರೀಮತಿ ಶಕುಂತಲಾ ಶೆಟ್ಟಿ ಇವರುಗಳು ಮುಖ್ಯ ಅಥಿತಿಗಳಾಗಿ ಆಗಮಿಸಲಿದ್ದಾರೆ.

ಶ್ರೀ ಕೃಷ್ಣ ಜಯಂತಿ ಅಂಗವಾಗಿ ದಿನಾಂಕ: 14-08-2017 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀಮತಿ ಶ್ವೇತಾ ಪ್ರಭು ಮತ್ತು ತಂಡದಿಂದ ಸುಗಮ ಸಂಗೀತ ಹಾಗೂ ಶ್ರೀಮತಿ ರಕ್ಷಾ ಜಯರಾಮ್ ಮತ್ತು ತಂಡದವರಿಂದ ಶ್ರೀ ಕೃಷ್ಣನ ಕುರಿತು ನೃತ್ಯರೂಪಕ ಹಾಗೂ ಡಿ. ಎನ್, ಮುನಿಕೃಷ್ಣ ಅವರಿಂದ ಶ್ರೀ ಕೃಷ್ಣನ ಕುರಿತು ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**33/33**

## ತಿದ್ದುಪಡಿ

ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)

ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಸದಸ್ಯರನ್ನಾಗಿ ಕ್ರಮಸಂಖ್ಯೆ 07 ರಲ್ಲಿ ಶ್ರೀ ಸ. ರಘುನಾಥ್, ಕೋಲಾರ ಮತ್ತು 9. ಕರ್ನಾಟಕ ಪುಸ್ತಕ ಪ್ರಾಧಿಕಾರಕ್ಕೆ ಸದಸ್ಯರನ್ನಾಗಿ ಕ್ರಮ ಸಂಖ್ಯೆ 01. ಡಾ: ಸಿದ್ದಣ್ಣ ಉಕ್ಕನಾಳ, ವಿಜಯಪುರ ಮತ್ತು ಕ್ರಮಸಂಖ್ಯೆ 03 ಶ್ರೀ ಪ್ರಕಾಶ ಕಂಬತ್ತಹಳ್ಳಿ ಬೆಂಗಳೂರು ಇವರನ್ನು ನೇಮಿಸಿದ್ದು ತಕ್ಷಣದಿಂದ ಜಾರಿಗೆ ಬರುವಂತೆ ಈ ಮೂವರ ನಾಮ ನಿರ್ದೇಶನಗಳನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

**34/34**

## ಕಾನೂನು ಪದವೀಧರರಿಗೆ ಪ್ರೋತ್ಸಾಹಧನ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಕಾನೂನು ಇಲಾಖೆ 2017-18 ನೇ ಸಾಲಿನಲ್ಲಿ ಅರ್ಹ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹಧನ ನೀಡುವ ಯೋಜನೆಗೆ ಸಂಬಂಧಿಸಿದಂತೆ ದಿನಾಂಕ 22-7-2017 ರಂದು ಸರ್ಕಾರ ಆದೇಶವನ್ನು ಹೊರಡಿಸಿದ್ದು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕಾನೂನು ಇಲಾಖೆ ಸರ್ಕಾರದ ಅಧೀನ ಕಾರ್ಯದರ್ಶಿ ತುಕಾರಾಮ ಕಲ್ಯಾಣಕರ ಅವರು ತಿಳಿಸಿದ್ದಾರೆ.

ಸರ್ಕಾರಿ ಆದೇಶ, ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಯನ್ನು ಕಾನೂನು ಇಲಾಖೆಯ ವೆಬ್‌ಸೈಟ್ **www.karnataka.gov.in/law** ನಲ್ಲಿ **Home page** ಪಡೆಯಲು ಅಧಿಕೃತ ಪ್ರಕಟಣೆ ತಿಳಿಸಿದೆ.

**35/35**

## ಕೇರಳದಲ್ಲಿ ಕನ್ನಡ-ಬೆಂಗಳೂರಿನಲ್ಲಿ ಮಲಯಾಳಂ ಚಲನ ಚಿತ್ರೋತ್ಸವ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಕೇರಳ ರಾಜ್ಯ ಚಲನಚಿತ್ರ ಅಕಾಡೆಮಿ ಸಹಯೋಗದಲ್ಲಿ ಕೇರಳದ ತಿರುವನಂತಪುರಂನಲ್ಲಿ ಕನ್ನಡ ಮತ್ತು ಬೆಂಗಳೂರಿನಲ್ಲಿ ಮಲಯಾಳಂ ಚಲನಚಿತ್ರೋತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಮಲಯಾಳಂ ಚಿತ್ರೋತ್ಸವವನ್ನು ಬೆಂಗಳೂರಿನ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ ಹಮ್ಮಿಕೊಳ್ಳಲಾಗಿದ್ದು ಆಗಸ್ಟ್ 11 ರಿಂದ 13 ರವರೆಗೆ ಮೂರು ದಿನಗಳ ಕಾಲ ನಡೆಯುವ ಚಿತ್ರೋತ್ಸವದಲ್ಲಿ ಒಟ್ಟು 8 ಮಲಯಾಳಂ ಚಿತ್ರಗಳು ಪ್ರದರ್ಶನ ಕಾಣಲಿವೆ.

ಆಗಸ್ಟ್ 11 ರಂದು ಮಧ್ಯಾಹ್ನ 2–30 ಗಂಟೆಗೆ ಕಾರ್ಯಕ್ರಮವನ್ನು ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್ ಅವರು ಉದ್ಘಾಟಿಸುವರು. ಚಲನಚಿತ್ರೋತ್ಸವ ಕುರಿತು ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿರ್ದೇಶಕ ಪಿ. ಶೇಷಾದ್ರಿ ಅವರು ಮಾತನಾಡುವರು. ಸಮಾರಂಭದ ಮುಖ್ಯ ಅತಿಥಿಗಳಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಡಾ: ಹರ್ಷ ಪಿ.ಎಸ್., ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ಸಾ.ರಾ. ಗೋವಿಂದು, ಪ್ರಶಸ್ತಿ ಪುರಸ್ಕೃತ ಮಲಯಾಳಂ ಚಲನಚಿತ್ರ ನಿರ್ದೇಶಕ ದಿಲೀಶ್ ಪೋಟಾನ್, ಪ್ರಶಸ್ತಿ ಪುರಸ್ಕೃತ ಮಲಯಾಳಂ ಚಲನಚಿತ್ರ ನಿರ್ದೇಶಕ ವಿನಯ್ ಫೋರ್ಟ್ ಭಾಗವಹಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ರಾಜೇಂದ್ರ ಸಿಂಗ್ ಬಾಬು ಅವರು ವಹಿಸುವರು.

ಮೊದಲ ದಿನ ಕಾರ್ಯಕ್ರಮದ ಉದ್ಘಾಟನೆಯ ನಂತರ ವಿಧು ವಿನ್ಸಂಟ್ ನಿರ್ದೇಶನದ ಮ್ಯಾನ್‌ಹೋಲ್ ಹಾಗೂ ದಿಲೀಶ ಪೋತನ್ ನಿರ್ದೇಶನದ ಮಹೇಶಿಂಟೆ ಪ್ರತಿಕಾರಂ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಆಗಸ್ಟ್ 12 ರಂದು ಬೆಳಿಗ್ಗೆ 11–00 ಗಂಟೆಗೆ ಸಾಜಿ ಎಸ್. ಪಾಲಮೆಲ್ ನಿರ್ದೇಶನದ ಆರಡಿ, ಮಧ್ಯಾಹ್ನ 2–30 ಕ್ಕೆ ಶಾನವಾಸ್ ಕೆ ಭವಕುಟ್ಟಿ ನಿರ್ದೇಶನದ ಕಿಸ್ಮತ್, ಸಂಜೆ 5–00 ಗಂಟೆಗೆ ರಾಜೀವ್ ರವಿ ನಿರ್ದೇಶನದ ಕಮ್ಮಟ್ಟಿ ಪಾದಂ.

ಆಗಸ್ಟ್ 13 ರಂದು ಬೆಳಿಗ್ಗೆ 11–00 ಗಂಟೆಗೆ ಶೈಜು ಗೋವಿಂದ್ ಮತ್ತು ಶೆರಿ ಗೋವಿಂದನ್ ನಿರ್ದೇಶನದ ಗಾಡ್ಸೆ , ಮಧ್ಯಾಹ್ನ 2–30 ಕ್ಕೆ ಟಿ.ವಿ. ಚಂದ್ರನ್ ನಿರ್ದೇಶನದ ಮೋಹವಲಯಂ, ಸಂಜೆ 5–00 ಗಂಟೆಗೆ ಬಿಜುಕುಮಾರ್ ದಾಮೋದರನ್ ನಿರ್ದೇಶನದ ಕಾಡು ಪುಕ್ಕುನ್ನನೀರಂ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಕೇರಳದ ತಿರುವನಂತಪುರಂನಲ್ಲಿ ಆಗಸ್ಟ್ 26 ರಿಂದ 28 ರವರೆಗೆ ಮೂರು ದಿನಗಳ ಕಾಲ ನಡೆಯುವ ಕನ್ನಡ ಚಲನಚಿತ್ರೋತ್ಸವದಲ್ಲಿ ಕನ್ನಡದ ಹೆಸರಾಂತ ಚಿತ್ರಗಳಾದ ತಿಥಿ, ಯುಟರ್ನ್, ಕಿರಿಕ್‌ಪಾರ್ಟಿ, ಹರಿಕಥಾ ಪ್ರಸಂಗ, ಮಾರಿಕೊಂಡವರು, ನಾನು ಅವನಲ್ಲ ಅವಳು ಮತ್ತು ರಾಮ ರಾಮ ರೇ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಕನ್ನಡವೂ ಸೇರಿದಂತೆ ಇತರ ಭಾರತೀಯ ಭಾಷಾ ಚಿತ್ರೋತ್ಸವವನ್ನು ರಾಜ್ಯದಲ್ಲಿ ಹಾಗೂ ಹೊರ ರಾಜ್ಯಗಳಲ್ಲಿ ಏರ್ಪಡಿಸುವುದು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಆಶಯವಾಗಿದೆ. ಕಳೆದ ತಿಂಗಳು ಹಮ್ಮಿಕೊಂಡಿದ್ದ ಬೆಂಗಳೂರಿನಲ್ಲಿ ಬೆಂಗಾಲಿ ಮತ್ತು ಕೊಲ್ಕತ್ತಾದಲ್ಲಿ ಕನ್ನಡ ಚಲನಚಿತ್ರೋತ್ಸವ ಯಶಸ್ವಿಯಾಗಿತ್ತು ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್.ಬಿ. ದಿನೇಶ್ ಅವರು ತಿಳಿಸಿದ್ದಾರೆ.

36/36

# ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ

## ಸರ್ಕಾರಿ ಮತ್ತು ಆಡಳಿತ ಮಂಡಳಿಯ ಶೇ. 50:50 ಸೀಟುಗಳ ಅನುಪಾತ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಮತ್ತು ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಸೀಟುಗಳ ಅನುಪಾತವನ್ನು ಶೇ. 50:50ರಂತೆ ನಿಗದಿಪಡಿಸಿದ್ದನ್ನು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕವು ಎತ್ತಿಹಿಡಿದಿದೆ.

ಸರ್ಕಾರವು ಜನಸಾಮಾನ್ಯರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಮತ್ತು ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಸೀಟುಗಳ ಅನುಪಾತವನ್ನು ಶೇ. 50:50ರಂತೆ ನಿಗದಿಪಡಿಸಲು ನಿರ್ಧರಿಸಿ ಸರ್ಕಾರ ಕಳೆದ ಜೂನ್‌ನಲ್ಲಿ ಆದೇಶವನ್ನು ಜಾರಿಮಾಡಲಾಗಿತ್ತು.

ಈ ಆದೇಶವನ್ನು ಪ್ರಶ್ನಿಸಿ, ಖಾಸಗಿ ಫಾರ್ಮಸಿ ಶೈಕ್ಷಣಿಕ ಸಂಸ್ಥೆಯವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ದಾವೆ ಹೂಡಿದ್ದರು. ಮಾನ್ಯ ಉಚ್ಚ ನ್ಯಾಯಾಲಯವು ವಾದ-ವಿವಾದವನ್ನು ಆಲಿಸಿ, ದಿನಾಂಕ: 07.08.2017 ರಂದು ಅರ್ಜಿದಾರರ ಎಲ್ಲಾ ಅರ್ಜಿಗಳನ್ನು ವಜಾಗೊಳಿಸಿ, ಫಾರ್ಮಸಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ನ್ಯಾಯಾಲಯವು ಮನಗಂಡು ಕಳೆದ ಜೂನ್‌ನಲ್ಲಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದಿದೆ. ಇದು ಒಂದು ಐತಿಹಾಸಿಕ ತೀರ್ಪು ಆಗಿರುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಅವರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ, 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಾಜ್ಯದ ಖಾಸಗಿ ಫಾರ್ಮಸಿ ಕಾಲೇಜುಗಳಲ್ಲಿನ ಸ್ನಾತಕೋತ್ತರ ಮತ್ತು ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸರ್ಕಾರಿ ಮತ್ತು ಆಡಳಿತ ಮಂಡಳಿಯ ಸೀಟುಗಳ ಅನುಪಾತವನ್ನು ಶೇ. 50:50ರಂತೆ ನಿರ್ಧರಿಸಿ ಸೀಟು ಹಂಚಿಕೆ ಮಾಡಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕ್ರಮವಹಿಸುತ್ತದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

37/37

## ಕರ್ನಾಟಕ ಲೋಕ ಸೇವಾ ಆಯೋಗ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕ ಸೇವಾ ಆಯೋಗವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ತಾತ್ಕಾಲಿಕ ಹುದ್ದೆಗಳು, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು– 09 (ಹೈಕ), ಮೀನುಗಾರಿಕೆ ಇಲಾಖೆಯಲ್ಲಿನ ಹಿರಿಯ ಮೀನುಗಾರಿಕೆ ಸಹಾಯಕ ನಿರ್ದೇಶಕರು– 04+01 (ಹೈಕ), ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರು – 02 (ಹೈಕ) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು 7–8–2017 ರಂದು ಆಯೋಗದ ಅಂತರ್ಜಾಲದಲ್ಲಿ http://kpsc.kar.nic.in/Selection List ನಲ್ಲಿ ಮಾಹಿತಿಯನ್ನು ಪ್ರಕಟಿಸಿದ್ದು

ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು 11–8–2017/ 13–8–2017 ನಿಗದಿತ ದಿನಾಂಕದೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001 ಇವರಿಗೆ ಸಲ್ಲಿಸಬಹುದು.

**38/38**

## ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಷ್ಯ ವೇತನಕ್ಕಾಗಿ ಅರ್ಜಿ ಸಲ್ಲಿಸಲು ಅವಧಿ ವಿಸ್ತರಿಸಲಾಗಿದೆ.

2017–18ರ ಸಾಲಿನಲ್ಲಿ ನೀಡಲಾಗುವ "ಮೆಟ್ರಿಕ್– ನಂತರದ ವಿದ್ಯಾರ್ಥಿವೇತನ", "ಶುಲ್ಕ ವಿನಾಯಿತಿ", ವಿದ್ಯಾಸಿರಿ– "ಊಟ ಮತ್ತು ವಸತಿ ಸಹಾಯ ಯೋಜನೆ" ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಆಹ್ವಾನಿಸಿರುವ ಅರ್ಜಿಯನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅರ್ಜಿ ಸಲ್ಲಿಸುವ ದಿನಾಂಕವನ್ನು 10–9–2017ರವರೆಗೆ ವಿಸ್ತರಿಸಲಾಗಿದೆ.

ಅರ್ಜಿಯನ್ನು ಆನ್‌ಲೈನ್ ಮೂಲಕ kareepass.cgg.gov.in ಹಾಗೂ www.backwardclasses.kar.nic.in ನಲ್ಲಿ ಸಲ್ಲಿಸಬಹುದು.

ಇತರೆ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ www.backwardclasses.kar.nic.in .ನ್ನು ವೀಕ್ಷಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**39/39**

# ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ/ ಕ್ರೀಡೆ, ಸಮಾಜ ಸೇವೆ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಹಿರಿಯ ನಾಗರಿಕರಿಗೆ ವೈಯಕ್ತಿಕ ಪ್ರಶಸ್ತಿಗಳಿಗಾಗಿ ಹಾಗೂ ಹಿರಿಯ ನಾಗರಿಕರ ಸಬಲೀಕರಣದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಂಸ್ಥೆಗಳಿಂದ ಸಾಂಸ್ಥಿಕ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಹಿರಿಯ ನಾಗರಿಕರು ಹಾಗೂ ಸಂಸ್ಥೆಗಳು ಕನ್ನಡ ಭಾಷೆಯಲ್ಲಿ, ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ದ್ವಿಪ್ರತಿಯಲ್ಲಿ ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೂಲಕ ದಿನಾಂಕ: 30-08-2017 ರೊಳಗಾಗಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡಲು ಕೋರಿದೆ.

ಹೆಚ್ಚಿನ ವಿವರಗಳಿಗಾಗಿ ಆಯಾ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳನ್ನು ಸಂಪರ್ಕಿಸಲು ಅಥವಾ ಇಲಾಖೆಯ ಜಾಲತಾಣ www.welfareofdisabled.kar.nic.in ನ್ನು ಪರಿಶೀಲಿಸಲು ಹಾಗೂ ದೂರವಾಣಿ ಸಂಖ್ಯೆ: 080-22860907, 080-22866046 ಸಂಪರ್ಕಿಸಲು ಪ್ರಕಟಣೆ ಕೋರಿದೆ.

**40/40**

# ಬಾಲ ಭವನದಿಂದ ಮಕ್ಕಳಿಗಾಗಿ ವಿನೂತನ ಕಾರ್ಯಕ್ರಮಗಳು

**ಬೆಂಗಳೂರು, ಆಗಸ್ಟ್ 8 (ಕರ್ನಾಟಕ ವಾರ್ತೆ)**

ಬಾಲ ಭವನವು 05-16 ವರ್ಷದ ಮಕ್ಕಳಲ್ಲಿ ಹುದುಗಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಲು ಅನುವಾಗುವಂತೆ, " ಬಾಲ ವೇದಿಕೆ" ಹಾಗೂ "ಉದ್ಯಾನದಲ್ಲಿ ಉದಯರಾಗ" ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಬಾಲ ಭವನದ ಬುರಜು ಗೋಡೆ ಆವರಣದಲ್ಲಿ ಆಗಸ್ಟ್ 2017 ರಿಂದ ಫೆಬ್ರವರಿ 2018 ರ ವರೆಗೆ ಪ್ರತಿ ಶನಿವಾರ ಹಾಗೂ ಭಾನುವಾರಗಳಂದು ಸಂಜೆ 4.30 ರಿಂದ 5.30 ರವರೆಗೆ ಏರ್ಪಡಿಸಲಾಗುವುದು.

ಚಿತ್ರಕಲೆ, ಕರಕುಶಲೆ, ಜೇಡಿಮಣ್ಣಿನ ಕಲೆ, ಕಥೆ, ಕವನ, ವಿಜ್ಞಾನ ಕ್ಷೇತ್ರದಲ್ಲಿರುವ ಹಾಗೂ ನೃತ್ಯ, ಸಂಗೀತ, ವಾದ್ಯ ಸಂಗೀತ, ನಾಟಕ, ಯಕ್ಷಗಾನ, ಜಾನಪದ ಗೀತೆ/ ನೃತ್ಯ, ಯೋಗದೊಂದಿಗೆ/ ಸ್ಕೇಟಿಂಗ್‌ನೊಂದಿಗೆ ನೃತ್ಯ, ಮ್ಯಾಜಿಕ್, ಇತ್ಯಾದಿ ಪ್ರತಿಭೆಯುಳ್ಳ ಮಕ್ಕಳಿಗೆ ಸೋಲೋ ಪ್ರದರ್ಶನಕ್ಕೆ ಅವಕಾಶ ನೀಡಲಾಗುವುದು.

ಮಕ್ಕಳಿಗೆ ನೃತ್ಯ ಸಂಗೀತ ನಾಟಕ ತರಬೇತಿ ನೀಡುವ ಸಂಸ್ಥೆಗಳಿಗೂ ಸಹ ತಮ್ಮ ಮಕ್ಕಳ ಪ್ರತಿಭೆಯನ್ನು ಪ್ರದರ್ಶಿಸಲು ಅನುವಾಗುವಂತೆ ಸಮೂಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಲು ಅವಕಾಶ ಕಲ್ಪಿಸಿದೆ. ಪ್ರದರ್ಶನ ನೀಡುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ಉಚಿತ ವೇದಿಕೆ ಮತ್ತು ಪ್ರೋತ್ಸಾಹ ಧನ/ ಗೌರವ ಸಂಭಾವನೆ ನೀಡಿ ಗೌರವಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕಾರ್ಯದರ್ಶಿಗಳ ಕಛೇರಿ, ಬಾಲ ಭವನ, ಕಬ್ಬನ್ ಉದ್ಯಾನವನ, ಬೆಂಗಳೂರು, ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ– 080 22861423, 22864189 ಮೂಲಕ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

**41/41**

## Malayalam Film Festival at Bangaluru- Kannada Film Festival at Tiruvananthapuram

**Bengaluru, August 8: Karnataka Chalanachitra Academy, Department of Information and Public Relations in collaboration with Kerala State Chalachitra Academy has organized Malayalam Film Festival at Bengaluru and Kannada Film Festival at Tiruvananthapuram, Kerala.**

**The Malayalam Film Festival is being held at Chamundeshwari Studios from August 11 -13$^{th}$ 2017 wherein 8 films will be screened.**

**K.J.George, Minister for Bengaluru Development will inaugurate the festival on August 11$^{th}$ at 2.30 pm. Nationally acclaimed filmmaker P.Sheshadri will speak on the occasion. Dr.P.S.Harsha, Director, Department of Information and Public Relations, Sa.Ra.Govindu, Chairman, Karnataka Film Chamber of Commerce, Award winning Malayalam Film Directors, Dileesh Pothan and Ms. Vidhu Vincent, Malayalam actor Vinay**

Fort will participate. The programme will be presided by Rajendra Singh Babu, Chairman, Karnataka Chalanachitra Academy.

Inaugural movie is Manhole directed by Ms.Vidhu Vincent. Maheshinte Prathikaaram will be screened next.

August 12$^{th}$: Aaradi, directed by Saji.S.Palamel -11.00 am, Kismath directed by Shanavas.K.Bavakutty-2.30 PM, and Kammatti Paadam – 5.00 pm directed by Rajeev ravi will be screened

August 13$^{th:}$ Godsay, directed by Shyju Govind & Sherry Govindan, Mohavalayam directed by T.V.Chandran and Kaadu Pookunna Neram, directed by Bijukumar Damodaran will be screened.

Kannada Film Festival at Tiruvanantapuram will be held from August 26- 28$^{th}$ 2017 for 3 days. Popular kannada movies like U-Turn, Thithi, Kirik Party, Harikatha Prasanga, Maarikondavaru, Naanu avanalla avalu and Rama Rama Re will be screened.

Karnataka chalanachitra Academy, in an effort to create a unique opportunity for the exchange of rich cultures of India through the common platform of cinema, is organizing such film Festivals. Mr.H.B.Dinesh, Registrar, Karnataka chalanachitra Academy noted that Bengali Film Festival organized in the month of July was a huge success.